1	2	3	4	5
4.	ತುಮಕೂರು	50	17	5
5.	ಶಿವಮೊಗ್ಗ	40	24	4
6.	ಚಿತ್ರದುರ್ಗ	22	21	0
7.	ದಾವಣಗೆರೆ	24	0	2
8.	ಮೈಸೂರು	33	15	7
9.	ಚಾಮರಾಜನಗರ	16	12	4
10.	ಮಂಡ್ಯ	31	21	1
11.	ಕೊಡಗು	16	0	4
12.	ಹಾಸನ	38	38	5
13.	ಚಿಕ್ಕಮಗಳೂರು	32	22	0
14.	ದಕ್ಷಿಣ ಕನ್ನಡ	17	8	5
15.	ಉಡುಪಿ	9	5	3
16.	ಧಾರವಾಡ	14	3	0
17.	ಗದಗ	11	8	1
18.	ಹಾವೇರಿ	19	13	0
19.	ಉತ್ತರ ಕನ್ನಡ	35	33	0
20.	ಬೆಳಗಾವಿ	35	18	6
21.	ಬಿಜಾಪುರ	18	1	0
22.	ಬಾಗಲಕೋಟೆ	18	11	0
23.	ರಾಯಚೂರು	37	9	0
24.	ಕೊಪ್ಪಳ	20	12	1
25.	ಬಳ್ಳಾರಿ	27	6	0
26.	ಗುಲ್ಬರ್ಗಾ	48	4	5
27.	ಬೀದರ್	30	0	2
	ಒಟ್ಟು	745	345	56

ರಾಜ್ಯದಲ್ಲಿ ತೋಟಗಾರಿಕಾ ಉತ್ಪನ್ನಗಳ ರಫ್ತು ವಲಯಗಳ ಬಗ್ಗೆ

4199 (4873) : ಶ್ರೀ ಎಂ.ಎಸ್. ಆಕ್ಕಾನುದ (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕಾ ಉತ್ಪನ್ನಗಳ ರಫ್ತು ವಲಯಗಳನ್ನು ಗುರುತಿಸಿ ರೂಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಇದರ ವಿವರಗಳೇನು?

ಇ) ರಫ್ತು ವಲಯದಲ್ಲಿನ ತೋಟಗಾರಿಕಾ ಉತ್ಪನ್ನಗಳ ಕೃಷಿ ಮಾಡುವ ರೈತರಿಗೆ ದೊರೆಯುವ ಸೌಲಭ್ಯಗಳೇನು? ವಿವರ ಒದಗಿಸುವುದು.

ಶ್ರೀ ಎಂ.ಶಿವಣ್ಣ (ತೋಟಗಾರಿಕಾ ಸಚಿವರು)

ಅ) ಹೌದು.

ಮಿಡಿಸೌತೆಕಾಯಿ (ಗರ್ಕಿನ್ಸ್) ಬೆಂಗಳೂರು ಗುಲಾಬಿ ಈರುಳ್ಳಿ (ರೋಸ್ ಅನಿಯನ್) ಮತ್ತು ಪುಷ್ಪಾಭಿವೃದ್ಧಿಗಾಗಿ ರಫ್ತು ವಲಯಗಳನ್ನು ಗುರುತಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ವಿವರಗಳು ಕೆಳಕಂಡಂತಿರುತ್ತದೆ:-

ಮಿಡಿಸೌತೆ – ರಫ್ತುವಲಯದಲ್ಲಿ ಒಳಗೊಂಡ ಜಿಲ್ಲೆಗಳು ಯಾವುವೆಂದರೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಹಾಸನ, ತುಮಕೂರು, ಚಿತ್ರದುರ್ಗ, ಧಾರವಾಡ ಹಾಗೂ ಬಾಗಲಕೋಟೆ

ಬೆಂಗಳೂರು ಗುಲಾಬಿ ಈರುಳ್ಳಿ – ರಫ್ತುವಲಯದಲ್ಲಿ ಒಳಗೊಂಡ ಜಿಲ್ಲೆಗಳು ಯಾವುವೆಂದರೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಗೂ ಕೋಲಾರ.

ಪುಷ್ಪಾಭಿವೃದ್ಧಿ – ರಫ್ತುವಲಯದಲ್ಲಿ ಒಳಗೊಂಡ ಜಿಲ್ಲೆಗಳು ಯಾವುವೆಂದರೆ, ಬೆಂಗಳೂರು ನಗರ ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಕೊಡಗು, ಬೆಳಗಾವಿ ಹಾಗೂ ಚಿತ್ರದುರ್ಗ.

ಈ ವಲಯಗಳಲ್ಲಿ ಆಯಾ ಬೆಳೆಗಳನ್ನು ರಫ್ತು ಗುಣಮಟ್ಟಕ್ಕೆ ಅನುಸಾರವಾಗಿ ಬೆಳೆಸಲು ರೈತರಿಗೆ ತರಬೇತಿ ನೀಡಲಾಗುತ್ತಿದೆ.

ಉತ್ಪಾದನಾ ಸಾಮಗ್ರಿಗಳನ್ನು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಬೆಳೆಗಾರರು ಮತ್ತು ರಫ್ತುದಾರರ ನಡುವೆ ಸಮನ್ವಯ ಸಾಧಿಸಿ, ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಮೇಲೆ ತಿಳಿಸಿರುವ ರಫ್ತು ವಲಯಗಳ ಜೊತೆಗೆ ಸುಗಂಧ ಮತ್ತು ಔಷಧಿ ಬೆಳೆ, ಪೆನಿಲ್ಲಾ ಬೆಳೆ, ಧ್ರಾಕ್ಷಿ, ಮಾವು, ದಾಳಿಂಬೆ ಮತ್ತು ನಿಂಬೆ ಬೆಳೆಗಳ ರಫ್ತು ವಲಯ ಗುರುತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ರಫ್ತು ವಲಯದಲ್ಲಿ ಗುಣಮಟ್ಟದ ಉತ್ಪನ್ನಗಳನ್ನು ಬೆಳೆಸುವ ಬಗ್ಗೆ ರೈತರಿಗೆ ತಾಂತ್ರಿಕ ಮಾಹಿತಿಯನ್ನು ಮತ್ತು ತರಬೇತಿಯನ್ನು ನೀಡಲಾಗುವುದು.

2) ಕೇಂದ್ರ ರಾಜ್ಯ ಮತ್ತು ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅಗತ್ಯ ಮೂಲಭೂತಸೌಕರ್ಯಗಳನ್ನು ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದು.

3) ಕೊಯಿಲು ನಂತರದ ನಿರ್ವಹಣೆ ಮತ್ತು ಮಾರುಕಟ್ಟೆ ಮಾಹಿಯನ್ನು ರೈತರಿಗೆ ಒದಗಿಸಲಾಗುವುದು.

4) ರಫ್ತಿಗೆ ಪ್ರೋತ್ಸಾಹದಾಯಕವಾದ ನೀತಿಯನ್ನು ಅನುಸರಿಸಲಾಗುವುದು,

5) ಉತ್ಪಾದಕರು ಮತ್ತು ರಫ್ತುದಾರರ ನಡುವೆ ವ್ಯವಹಾರಿಕ ಸಂಪರ್ಕ ಏರ್ಪಡಿಸಲಾಗುವುದು.

6) ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ಪನ್ನಗಳನ್ನು ಪರಿಚಯ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಕೊರತೆ ಮತ್ತು ಕೆರೆಗಳ ಅಭಿವೃದ್ಧಿ ಕುರಿತು

4200 (4953) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲಾ ಬಯಲಿನ ಪ್ರದೇಶದಲ್ಲಿರುವ ನಾಲಾ ಕೊನೆಯ ಭಾಗದ ಅಚ್ಚುಕಟ್ಟು ಪ್ರದೇಶ ನೀರಿನ ಕೊರತೆ ಸಮಸ್ಯೆ ಅನುಭವಿಸುತ್ತಾ ಇರುವುದನ್ನು ಗಮನಿಸಲಾಗಿದೆಯೇ ಅಂತೆಯೇ, ವಿ.ಸಿ. ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯ ರೈತರಿಗೆ ಕೆರೆಯ ಉಪಯುಕ್ತತೆ ಮತ್ತು ಅವಶ್ಯಕತೆಯನ್ನು ಸರ್ಕಾರವು ಅರಿತಿದೆಯೇ;

ಆ) ಹಾಗಿದ್ದಲ್ಲಿ, ನಾಲಾ ಭಾಗದ ಕೊನೆಯ ಪ್ರದೇಶದ ಅಚ್ಚುಕಟ್ಟಿನ ನೀರಿನ ಕೊರತೆಯ ಸಮಸ್ಯೆಯನ್ನು ನಿವಾರಿಸಲು ಹಾಗೂ ಕೆರೆಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ವಿಶೇಷವಾದ ಕ್ರಮಗಳನ್ನೇನಾದರೂ ಸರ್ಕಾರವು ಆಲೋಚಿಸಿ ರೂಪಿಸಿದ್ದಲ್ಲಿ ಅದರ ವಿವರಗಳೇನು;

ಇ) ರೂಪಿಸದೇ ಇದ್ದಲ್ಲಿ ಕಾರಣಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ವಿಶ್ವೇಶ್ವರಯ್ಯ ನಾಲ ಬಯಲಿನ ಪ್ರದೇಶದಲ್ಲಿರುವ ನಾಲಾ ಕೊನೆಯ ಭಾಗದ ಅಚ್ಚುಕಟ್ಟು ಪ್ರದೇಶ ನೀರನ್ನು ಒದಗಿಸುವ ಸಲುವಾಗಿ ಈಗಾಗಲೇ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಅಚ್ಚುಕಟ್ಟು ಪ್ರದೇಸದಲ್ಲಿ ನೀರನ್ನು ಮಿತವಾಗಿ ಬಳಸುವ ಸಲುವಾಗಿ ವಿವಿಧ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ವಿ.ಸಿ. ಅಚ್ಚುಕಟ್ಟಿನ ಪ್ರದೇಶದ ವ್ಯಾಪ್ತಿಯ ಕೆರೆಗಳನ್ನು ಅಭಿವೃದ್ಧಿಪಡಿಸಿ ನೀರನ್ನು ಶೇಖರಿಸುವುದರಿಂದ ಅಂತಜ್ಲ ಹೆಚ್ಚುತ್ತದೆ ಜೊತೆಗೆ ರೈತರಿಗೆ ಹೆಚ್ಚು ಉಪಯೋಗವಾಗುತ್ತದೆ. ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಹಂತಹಂತವಾಗಿ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಕಾವೇರಿ ಜಲಾನಯನ ಪ್ರದೇಸದ ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸುವ ಹಾಗೂ ಅಚ್ಚುಕಟ್ಟು ಪ್ರದೇಶವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸರ್ಕಾರವು ಕಾವೇರಿ ನೀರಾವರಿ ನಿಗಮವನ್ನು ಸ್ಥಾಪಿಸಿದೆ. ವಿ.ಸಿ. ನಾಲಾ ಅಚ್ಚುಕಟ್ಟು ಪ್ರದೇಶವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಥಮವಾಗಿ ಮತ್ತು ಪ್ರಾಯೋಗಿಕವಾಗಿ ಮದ್ದೂರು ಕೆರೆ, ಸೂಳೆಕೆರೆ ಮತ್ತು ಮಂಗಳ ಕೆರೆಯಲ್ಲಿ ಹೊಳೆತ್ತಿ ಅಭಿವೃದ್ಧಿಪಡಿಸುವುದಕ್ಕಾಗಿ ಅಂದಾಜು ತಯಾರಿಸಿ ಅನುಮೋದಿಸಲಾಗಿದೆ ಮದ್ದೂರು ಕೆರೆ ಮತ್ತು ಸೂಳೆಕೆರೆಗಳಲ್ಲಿ ಕಾಮಗಾರಿಯು ಪ್ರಗತಿಯಲ್ಲಿದೆ. 2001-2 ನೇ ಸಾಲಿನಲ್ಲಿ ಬೋಳಾರೆ ಕೆರೆ ಅಭಿವೃದ್ಧಿಗಾಗಿ ರೂ 95.30 ಲಕ್ಷಗಳು ಹಗೂ ಚಂದಪಳ್ಳಿ ಕೆರೆಯ ಅಭಿವೃದ್ಧಿಗಾಗಿ ರೂ. 20.00 ಲಕ್ಷಗಳ ವೆಚ್ಚದಲ್ಲಿ ಪೂರ್ಣಗೊಳಿಸಲಗಿದೆ. 2002-03 ನೇ ಸಾಲಿನಲ್ಲಿ ಬೆಸಗರಹಳ್ಳಿ ಕೆರೆ ಅಭಿವೃದ್ಧಿಗಾಗಿ ರೂ. 44.98 ಲಕ್ಷಗಳು, ಕೊಪ್ಪ ಕೆರೆ ಅಭಿವೃದ್ಧಿಗಾಗಿ ರೂ. 14.80 ಲಕ್ಷಗಳು, ಮದ್ದೂರು ಕೆರೆ ಅಭಿವೃದ್ಧಿಗಾಗಿ ರೂ. 13.05 ಲಕ್ಷಗಳು ಮತ್ತು ನಿಲುವಾಗಿಲು ಕೆರೆ ಅಭಿವೃದ್ಧಿಗಾಗಿ ರೂ. 14.98 ಲಕ್ಷಗಳ ಅಂದಾಜಿನ ಕಮಗಾರಿಗಳು ಪ್ರಗತಿಯಲ್ಲಿವೆ. ಅಲ್ಲದೇ ಹೊಸಕೆರೆ ವಳಗೆರೆಹಳ್ಳಿಕೆರೆ ಹೂಳೆತ್ತುವ ಕಾಮಗಾರಿಗಾಗಿ ರೂ. 44.10 ಲಕ್ಷ ಮತ್ತು ಬೆಕ್ಕಾಳಲೆ ಕೆರೆಯ ಹೂಳೆತ್ತುವ ಕಾಮಗಾರಿಗಾಗಿ ರೂ.